ಸಾಕ್ಷಿಯನ್ನು ದಿಃ24.06.2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀಃ ಹೆಚ್.ಕೆ.ಎಸ್. ದೂರುದಾರರ ಪರ ವಕೀಲರಿಂದ

32. ನಾನು ಫೈನಾನ್ಸ್ ಗೆ ಕಂತನ್ನು ಕಟ್ಟುವ ಪೂರ್ವದಲ್ಲಿ ಕೆಲವೊಮ್ಮೆ ಪಿರ್ಯಾದುದಾರರಿಗೆ ನಗದು ರೂಪದಲ್ಲಿ ಹಣವನ್ನು ನೀಡಿ ನಂತರ ಅವರಿಂದ ಫೋನ್ ಪೆ ಮಾಡಿಸುತ್ತಿದ್ದೆ ಎಂದರೆ ಸರಿಯಲ್ಲ. ಮೊಬೈಲ್ ದೂರವಾಣಿ ಸಂಖ್ಯೆ 8861610127 ಇದು ನನಗೆ ಸೇರಿದ್ದು ಎಂದರೆ ಸರಿ. ಅದರಲ್ಲಿ ಫೋನ್ ಪೆ ಇರುತ್ತದೆ ಎಂದರೆ ಸರಿ. ಸದರಿ ನಂಬರಿಗೆ ಪಿರ್ಯಾದುದಾರ ತನ್ನ ನಂಬರ್ ನಿಂದ ಹಾಗೂ ನಾನು ಪಿರ್ಯಾದುದಾರನಿಗೆ ಫೋನ್ ಪೆ ಮಾಡುತ್ತಿದ್ದೆವು ಎಂದರೆ ಸರಿ. ಸಾಕ್ಷಿಗೆ ಈ ಬಗ್ಗೆ ಒಟ್ಟು 7 ದಾಖಲೆಗಳನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಗಳು ಫೋನ್ ಪೆ ಮುಖಾಂತರ ಹಣ ವರ್ಗಾವಣೆಯಾದ ಬಗ್ಗೆ ದಾಖಲೆಗಳು ಎಂದು ಒಪ್ಪಿದ್ದರಿಂದ ಅವುಗಳನ್ನು ಕ್ರಮವಾಗಿ **ನಿಪಿ-6 ರಿಂದ 12** ಎಂದು ಗುರುತಿಸಲಾಯಿತು. ಸದರಿ ನಿಪಿ-6 ರಿಂದ 12 ದಾಖಲೆಗಳಲ್ಲಿ ಕಾಣಿಸಿದ ದಾಖಲೆಗಳು 2021 ರಿಂದ 2024 ರವರೆಗೆ ಆದ ಹಣ ವರ್ಗಾವಣೆಯ ದಾಖಲೆಗಳು ಎಂದರೆ ಸರಿ. ಸದರಿ ನಿಪಿ-6 ರಿಂದ 12 ದಾಖಲೆಗಳಲ್ಲಿ ನಮೂದಿಸಿದ ಹಣ ವರ್ಗಾವಣೆ ಆದ ಸಮಯದಲ್ಲಿ ನನ್ನ ತಾಯಿ 2 ಚೆಕ್ ಗಳನ್ನು ನೀಡಿರುತ್ತಾರೆ. ಸಾಕ್ಷಿ ಸ್ವತಃ ಸದರಿ 2 ಚೆಕ್ ಗಳನ್ನು 2024 ರಲ್ಲಿ ನೀಡಲಾಗಿರುತ್ತದೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಸದರಿ 2 ಚೆಕ್ ಗಳು ನನಗೆ ಸೇರಿದ ಎಸ್‌ಬಿಐ ಬ್ಯಾಂಕ್ ಗೆ ಸಂಬಂಧಪಟ್ಟದ್ದಿರುತ್ತದೆ. ಸದರಿ ಚೆಕ್ ಗಳಿಗೆ ನಾನು ಸಹಿಯನ್ನು

ಮಾಡಿ ನಗದು ಮತ್ತು ದಿನಾಂಕವನ್ನು ನಮೂದಿಸಿ ನೀಡಿರುವುದಿಲ್ಲ. ಖಾಲಿ ಚೆಕ್ ನೀಡಿರುತ್ತೇನೆ.

33. ನನ್ನ ತಾಯಿಯ ಬ್ಯಾಂಕ್ ಖಾತೆಗೆ ಸರ್ಕಾರದ ಗೃಹಲಕ್ಷ್ಮೀ ಮತ್ತು ಇನ್ನಿತರ ಹಣಕಾಸಿನ ಸೌಲಭ್ಯಗಳು ವರ್ಗಾವಣೆ ಆಗುತ್ತವೆ ಎಂದರೆ ಸರಿ. ನಾನು ಫೈನಾನ್ಸ್ ನಲ್ಲಿ ಕೆಲಸ ಮಾಡಿದ್ದುದರಿಂದ ನನಗೆ ಫೈನಾನ್ಸ್ ನಿಯಮಗಳು ಗೊತ್ತಿರುತ್ತದೆ. ಗುಂಪು ಯೋಜನೆ ಫೈನಾನ್ಸ್ ನಲ್ಲಿ ಯಾವುದೇ ಚೆಕ್ ಗಳನ್ನು ಪಡೆದುಕೊಳ್ಳುವುದಿಲ್ಲ ಎಂದರೆ ಸರಿಯಲ್ಲ. ಐಐಎಫ್ಎಲ್ ಸಮಸ್ತ ಫೈನಾನ್ಸ್ ನಲ್ಲಿ ಚೆಕ್ ಗಳನ್ನು ಪಡೆದುಕೊಳ್ಳುವುದಿಲ್ಲ ಎಂದರೆ ಸರಿ. ನನಗೆ ಮತ್ತು ನಮ್ಮ ಊರಾದ ತಿಮಕಾಪುರದ ಪೋಸ್ಟ್ ಮನ್ ಗೆ ಯಾವುದೇ ವೈಮನಸ್ಸು ಇರುವುದಿಲ್ಲ. ಸಾಕ್ಷಿ ಸ್ವತಃ ನನಗೆ ಅವರ ಪರಿಚಯವಿರುವುದಿಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ಎಂಕೆ ಫೈನಾನ್ಸ್ ನಲ್ಲಿ ನನ್ನ ತಾಯಿ ಸಾಲವನ್ನು ಪಡೆದುಕೊಂಡಿದ್ದು ಅದನ್ನು ತೀರಿಸಿದ್ದು ಚೆಕ್ ವಾಪಸ್ ಕೊಡಿ ಎಂದು ಲಿಖಿತ ರೂಪದಲ್ಲಿ ನಾನು ಕೇಳಿಕೊಂಡಿರುವುದಿಲ್ಲ. ಸಾಕ್ಷಿ ಸ್ವತಃ ದೂರವಾಣಿ ಮುಖಾಂತರ ಮತ್ತು ನೇರವಾಗಿ ಸಂಪರ್ಕ ಮಾಡಿ ಕೇಳಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿಯುತ್ತಾರೆ. ನಾನು ಮತ್ತು ನನ್ನ ತಾಯಿ ದೂರುದಾರರಲ್ಲಿ ಸದರಿ ಚೆಕ್ ಅನ್ನು ಹಿಂದಿರುಗಿಸುವಂತೆ ಕೇಳಿದಾಗ ನಿಮ್ಮ ಸಾಲವೆಲ್ಲಾ ಚುಕ್ತವಾಗಿರುತ್ತದೆ, ನನ್ನ ಮೇಲೆ ನಂಬಿಕೆ ಇಲ್ಲವೇ, ತಂದು ಕೊಡುತ್ತೇನೆ ಎಂದು ಹೇಳಿರುತ್ತಾರೆ. ನಾನು ಪೊಲೀಸ್ ಠಾಣೆಯಲ್ಲಿ ಈ ಪ್ರಕರಣ ದಾಖಲಾದ ನಂತರ ಚೆಕ್ ದುರುಪಯೋಗವಾದ ಬಗ್ಗೆ ದೂರನ್ನು ನೀಡಿರುವುದಿಲ್ಲ. ನಿಪಿ-1 ಚೆಕ್ ಅನ್ನು ರೂ.20 ಸಾವಿರಗಳಿಗೆ ನೀಡಿದ್ದು ಅದಕ್ಕೆ ಒಂದು ಸೊನ್ನೆಯನ್ನು ಸೇರಿಸಿ ರೂ.2 ಲಕ್ಷ ಎಂದು

ದುರುಪಯೋಗ ಮಾಡಿರುತ್ತಾರೆ ಎಂದು ನಿಮ್ಮ ವಕೀಲರು ಪಾಟೀಸವಾಲಿನಲ್ಲಿ ಆದರಿಸಿದ್ದು ಈ ಬಗ್ಗೆ ನೀವು ದೂರನ್ನು ನೀಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲವೆಂದು ಉತ್ತರಿಸುತ್ತಾರೆ. ನಿಪಿ-1 ಚೆಕ್ ಅನ್ನು ಫಾರೆನ್ಸಿಕ್ ಸೈನ್ಸ್‌ಗೆ ಕಳುಹಿಸಲು ನಮ್ಮ ಅಭ್ಯಂತರ ಇರುವುದಿಲ್ಲ. ಸದರಿ ನಿಪಿ-1 ಚೆಕ್ ಅನ್ನು ನನ್ನ ತಾಯಿ ಪಿರ್ಯಾದುದಾರರಿಗೆ ನೀಡಿರುತ್ತಾರೆ. ನನ್ನ ತಾಯಿಯ ಚೆಕ್ ಪಿರ್ಯಾದುದಾರರಿಗೆ ನೀಡಲು ತೊಂದರೆ ಇರಲಿಲ್ಲ. ಟಿನ್ ಸಂಖ್ಯೆ, ಲೈಸನ್ಸ್ ನಂಬರ್ ಇತ್ಯಾದಿ ವಿವರಗಳನ್ನು ಒಳಗೊಂಡ ದಾಖಲೆಗಳನ್ನು ಕೇಳಲು ನನಗೆ ತೊಂದರೆ ಇರಲಿಲ್ಲ. ನಿಡಿ-2ರ ಪ್ರಕಾರ ರೂ.8 ಸಾವಿರ ನಗದು ಪಿರ್ಯಾದುದಾರರಿಗೆ ಪಾವತಿ ಮಾಡಿದ್ದು ನಮೂದು ಇರುತ್ತದೆ. ಸಾಕ್ಷಿ ಸ್ವತಃ ರೂ.16 ಸಾವಿರ ನಗದು ರೂಪದಲ್ಲಿ ಹಾಗೂ ರೂ.1 ಸಾವಿರ ಫೋನ್ ಪೆ ಮುಖಾಂತರ ಪಿರ್ಯಾದುದಾರರಿಗೆ ವರ್ಗಾವಣೆ ಮಾಡಿದ ಮೊತ್ತ ನಿಡಿ-2ರಲ್ಲಿ ನಮೂದು ಆಗಿರುವುದಿಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ದಿಃ 27.06.2024 ರಂದು ಖಾಲಿ ಚೆಕ್ ಅನ್ನು ಪಿರ್ಯಾದುದಾರರಿಗೆ ನೀಡಿರುತ್ತೇವೆ. ನನಗೆ ಫೈನಾನ್ಸ್ ವ್ಯವಹಾರದ ಬಗ್ಗೆ ಮಾಹಿತಿ ಇದ್ದು ಸದರಿ ಚೆಕ್ ಗಳನ್ನು ವಿವರಗಳನ್ನು ನಮೂದಿಸಿ ಯಾವುದೇ ತೊಂದರೆ ಇರಲಿಲ್ಲ. ಸಾಕ್ಷಿ ಸ್ವತಃ ಪಿರ್ಯಾದುದಾರ ಮೋಸ ಮಾಡುತ್ತಾರೆ ಎಂದು ನನಗೆ ಭಾವನೆ ಇರಲಿಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. 2021 ರಿಂದ ದಿಃ 21.09.2024 ರವರೆಗೆ ಆಗಿರುವ ವ್ಯವಹಾರಗಳು ಫೈನಾನ್ಸ್‌ಗೆ ಸಂಬಂಧಪಟ್ಟ ವ್ಯವಹಾರಗಳಾಗಿರುತ್ತವೆ ಎಂದರೆ ಸರಿಯಲ್ಲ. ನಿಡಿ-2 ಅನ್ನು ನಾನು ಈ ಪ್ರಕರಣ ದಾಖಲಾದ ನಂತರ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾಖಲೆಗಳಲ್ಲಿ ಕಾಣುವ ಸಹಿಗಳು ಪಿರ್ಯಾದುದಾರರದ್ದಲ್ಲ ಎಂದರೆ ಸರಿಯಲ್ಲ. ಪಿರ್ಯಾದುದಾರರು

ನನಗೆ ತುಂಬಾ ವರ್ಷದಿಂದ ಪರಿಚಯಸ್ಥರಿರುವುದರಿಂದ ಮನೆ ನಿರ್ಮಾಣ ಮಾಡಲು ಮತ್ತು ಕೈ ಸಾಲವನ್ನು ಪಡೆದಿರುತ್ತೇನೆ ಮತ್ತು ಅದರ ಮರುಪಾವತಿಗಾಗಿ ನಿಪಿ-1 ಚೆಕ್ ಅನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಊರಿನಲ್ಲಿ ಇದ್ದರೂ ಸಹ ವಕೀಲರ ಮೂಲಕ ಕಳುಹಿಸಿದ ನೋಟಿಸನ್ನು ಪಡೆಯದೇ ಪೋಸ್ಟ್‌ಮನ್ ಮುಖಾಂತರ ಸದರಿ ವಿಳಾಸದಲ್ಲಿ ಖಾಲಿ ಮಾಡಿರುತ್ತೇವೆ ಎಂದು ನಮೂದಿಸಿ ನೋಟಿಸನ್ನು ವಾಪಸ್ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಪಿರ್ಯಾದುದಾರರಿಗೆ ಕೇವಲ 1 ಚೆಕ್ ಮಾತ್ರ ನೀಡಿದ್ದು 2 ಚೆಕ್ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ರೂ.2 ಲಕ್ಷವನ್ನು ಎತ್ತಿ ಹಾಕುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಗ್ರಾಮ ಪಂಚಾಯಿತಿ ಅಧ್ಯಕ್ಷೆಯಾಗಿದ್ದಾಗ ಅವರ ವಿರುದ್ದ ಹಣ ದುರುಪಯೋಗ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಾಯಿ ಸೇರಿ ದಾಖಲೆಗಳನ್ನು ಸೃಷ್ಟಿಮಾಡಿ ಹಣ ಹೊಡೆಯುವ ಉದ್ದೇಶ ಹೊಂದಿರುತ್ತೇವೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ